**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರ**

**ಅಪರಾಧ ಮೊಕದ್ದಮೆ ಸಂಖ್ಯೆಃ 7/2021**

ಪಿರ್ಯಾದಿ : ಸರಕಾರ, ಸವಣೂರ ಪೋಲಿಸ ಠಾಣೆ.

**ವಿರುದ್ಧ**

ಆರೋಪಿತರು 1. ಚಮನಸಾಬ ತಂದೆ ದವಲಸಾಬ ಕಣವಿ,
ವಯಾ : 45 ವರ್ಷಗಳು, ಉದ್ಯೋಗ : ಕೂಲಿ,
ಸಾ : ತೆಗ್ಗಿಹಳ್ಳಿ, ತಾ : ಸವಣೂರ, ಜಿ : ಹಾವೇರಿ.

7. ದೀಲಶಾದಬಿ ಕೋಂ ಚಮನಸಾಬ ಕಣವಿ,
ವಯಾ : 40 ವರ್ಷಗಳು, ಉದ್ಯೋಗ : ಮನೆಗೆಲಸ,
ಸಾ : ತೆಗ್ಗಿಹಳ್ಳಿ, ತಾ : ಸವಣೂರ, ಜಿ : ಹಾವೇರಿ.

**ದೋಷಾರೋಪಣೆ**

ನಾನು ಶ್ರೇಯಾಂಶ ದೊಡ್ಡಮನಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು ಸವಣೂರ, ಮೇಲ್ಕಾಣಿಸಿದ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಮೇಲ್ಕಾಣಿಸಿದ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ದಿನಾಂಕ : 17.11.2019 ರಂದು ರಾತ್ರಿ 08.00 ಗಂಟೆ ಸುಮಾರಿಗೆ ತೆಗ್ಗಿಹಳ್ಳಿ ಗ್ರಾಮದ ಆರೋಪಿತರ ಮನೆಯ ಮುಂದೆ ಪಿರ್ಯಾದುದಾರಳು ಹಾಯ್ದು ಹೋರಟಾಗ ತಮ್ಮ ಮನೆಯ ಮುಂದೆ ನಿಂತಿದ್ದ ಆರೋಪಿತನು ಪಿರ್ಯಾದುದಾರಳಿಗೆ ನೋಡಿ ಅವಾಚ್ಯವಾಗಿ ಬೈದಾಡ ಹತ್ತಿದ್ದು, ಆಗ ಪಿರ್ಯಾದುದಾರಳು ನೋಡ್ರಿ ಭಯ್ಯಾ ನಾನು ನಿಮ್ಮ ಮೇಲೆ ಕೇಸ್ ಕೊಟ್ಟಿಲ್ಲ ನನಗೆ ಯಾರು ಅನ್ಯಾಯ ಮಾಡಿದಾರಲ್ಲಾ ಅವರ ಮೇಲೆ ಕೇಸ್ ಕೊಟ್ಟಿನಿ, ನೀವು ನೋಡಿ ಮಾತಾಡಕ ಕಲಿರಿ, ಹೆಣ್ಣುಮಕ್ಕಳಿಗೆ ಹಂಗೆಲ್ಲಾ ಬೈದಾಡ ಬ್ಯಾಡ್ರಿ ಅಂತಾ ಹೇಳಿದರೂ ಕೂಡ,ಆರೋಪಿ ನಂ.1 ಮತ್ತು 7 ನೇದವರು ಅವಾಚ್ಯ ಶಬ್ದದಿಂದ ಬೈದು ಸದರಿ ಶಬ್ದಗಳು ಸಾರ್ವಜನಿಕ ಶಾಂತತಾ ಭಂಗವುಂಟು ಮಾಡುವ ಅಥವಾ ಇನ್ನೊಂದು ಅಪರಾದಕ್ಕೆ ಪ್ರಚೋದನೆ ನೀಡುವಂತಹ ಶಬ್ದಗಳು ಅಂತಾ ಗೊತ್ತಿದ್ದರು, ಪಿರ್ಯಾದಿಗೆ

ಇವರಿಗೆ ಅವಮಾನ ಮಾಡಬೇಕು ಅಂತಾ ಸದರಿ ಶಬ್ದಗಳನ್ನು ಬಳಸಿ ಪಿರ್ಯಾದಿಗೆ ಅವಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರ ಸಹ ವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಎರಡನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ 1 ನೇ ಆರೋಪಿಯಾದ ನೀನು ಕೈ ಅಗಲ ಮಾಡಿ ಪಿರ್ಯಾದುದಾರಳಿಗೆ ಮುಂದೆ ಹೋಗದಂತೆ ಅಡ್ಡಗಟ್ಟಿ ತರುಬಿ ಹಿಂಸೆಗೆ ಅನುಕೂಲ ಮಾಡಿಕೊಟ್ಟಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಮೂರನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ, 7 ನೇ ಆರೋಪಿಯಾದ ನೀನು ಸ್ವ ಇಚ್ಚೆಯಿಂದ ಪಿರ್ಯಾದುದಾರಳ ಕಪಾಳಕ್ಕೆ, ಬೆನ್ನಿಗೆ, ಮೈಕೈಗೆ ಸಿಕ್ಕಸಿಕ್ಕಲ್ಲಿ ಹೊಡೆದು ಕಾಲಿನಿಂದ ಒದ್ದು, ನೋವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ನಾಲ್ಕನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ, ಆರೋಪಿ ನಂ.7 ನೇದವಳು ಕೈಯಿಂದ ಪಿರ್ಯಾದಿಯ ಕಪಾಳಕ್ಕೆ, ಬೆನ್ನಿಗೆ, ಮೈಕೈಗೆ ಹೊಡೆಯಹತ್ತಿದ್ದು, ಆರೋಪಿ ನಂ.1 ನೇದವನು ಹಾಕ್ ಅವಳಿಗೆ ಯಾರೋ ಮಾಡಿದ ತಪ್ಪಿಗೆ ಯಾರದೋ ಮೇಲೆ ಕೇಸ್ ಕೊಡ್ತಾಳ ಈಕಿ ಬಿಡಬ್ಯಾಡ ಅಕಿಗೆ ಹೊಡೆದು ಕೊಂದು ಹಾಕಿ ಅಂತಾ ಪ್ರಚೋದನೆ ಮಾಡಿದ್ದುದರ ಮೇರೆಗ 7 ನೇ ಆರೋಪಿ ಪಿರ್ಯಾದಿಗೆ ಕೈಯಿಂದ ಅವರ ಮೈಕೈಗೆ ಸಿಕ್ಕಸಿಕ್ಕಲ್ಲಿ ಹೊಡೆದು ಕಾಲಿನಿಂದ ಒದ್ದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 114 ಸಹಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಕೊನೆಯದಾಗಿ, ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ, ಆರೋಪಿ ನಂ.1 ಮತ್ತು 7 ನೇದವರು ಪಿರ್ಯಾದುದಾರಳಿಗೆ ಇವತ್ತು ಉಳಕೊಂಡಿ ನೀನು ಕೇಸ್ ಹೊಳ್ಳಿ ತಕ್ಕೋಳಲಿಲ್ಲಾ ಅಂದ್ರ ನಿನಗೆ ಮತ್ತು ನಿಮ್ಮ ಅಣ್ಣನಿಗೆ ಜೀವಂತ ಬೆಂಕಿ ಹಚ್ಚಿ ಸುಟ್ಟು ಕೊಂದು ಹಾಕುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ

ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ನೀವು ವಿಚಾರಣೆ ಎದುರಿಸತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

(ಶ್ರೀ. ಶ್ರೇಯಾಂಶ ದೊಡ್ಡಮನಿ)
ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು ಸವಣೂರ.

## ಆರೋಪಿಯ ಉತ್ತರ

ಪ್ರಶ್ನೆ.1 : ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ತಿಳಿಯಿತೇ ?

ಉತ್ತರ :

ಪ್ರಶ್ನೆ.2 : ಈ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ ?

ಉತ್ತರ :

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ)

ಸ್ಥಳ : ಸವಣೂರ
ದಿನಾಂಕ :

ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು.
ಸವಣೂರ.

ಆರೋಪಿತರ ಸಹಿ